VIJAYAKUMAR KANNUR
Digitally signed by VIJAYAKUMAR KANNUR
Date: 2026.01.22 15:39:33 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 22.01.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯರ ಪರ ಶ್ರೀ ಟಿ ಸಿ ಬಿ ವಕೀಲರಿಂದ :**

ವಾದಿ ನನ್ನ ಅಣ್ಣನಾದ ಮೃತ ವೆಂಕಪ್ಪನ ಮಗಳಾಗಬೇಕು ಎಂದರೆ ಸರಿ. ವಾದ ಪತ್ರದಲ್ಲಿ ಲಗತ್ತಿಸಿರುವ ವಂಶಾವಳಿಯನ್ನು ನಾನು ನೋಡಿರುವುದಿಲ್ಲ. ನನ್ನ ತಂದೆಯ ಹೆಸರು ಕಿಡಿಯಪ್ಪ ಎಂದರೆ ಸರಿ. ತಾಯಿ ಹೆಸರು ಗೌರವ್ವ ಎಂದರೆ ಸರಿ. ಇವರಿಗೆ ನಾನು ಮತ್ತು ವೆಂಕಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ವೆಂಕಪ್ಪನಿಗೆ ಶಾಂತವ್ವ ಮತ್ತು ರೇಣುಕಾ ಎಂಬ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲ ಹೆಂಡತಿ ಶಾಂತವ್ವ ಮೃತ ಪಟ್ಟಿರುವಳು ಎಂದರೆ ಸರಿ. ಇವಳ ಮಗಳು ಮೃತ ಶ್ವೇತಾ ಎಂದರೆ ಸರಿ. 2 ನೇ ಹೆಂಡತಿ ರೇಣುಕಾ ಪ್ರತಿವಾದಿ 2 ಇವಳಿಗೆ ಪ್ರತಿವಾದಿ 3 ರಿಂದ 5 ರವರು ಮಕ್ಕಳಾಗಿರುವರು ಎಂದರೆ ಸರಿ.

2. ನನ್ನ ತಂದೆ ಕಿಡಿಯಪ್ಪ ದಿಃ 04.08.2023 ರಂದು ಮೃತ ಪಟ್ಟಿರುವನು ಎಂದರೆ ಸರಿ. ನನ್ನ ಸಹೋದರ ವೆಂಕಪ್ಪ ದಿಃ 10.08.2023 ರಂದು ಮೃತ ಪಟ್ಟಿರುವನು ಎಂದರೆ ಸರಿ. ಶಾಂತವ್ವ 2013 ರಲ್ಲಿ ಮೃತ ಪಟ್ಟಿರುವಳು ಎಂದರೆ ಸರಿ. ನನ್ನ ತಾಯಿ ಗೌರವ್ವ 2023 ರ ನವೆಂಬರ ತಿಂಗಳಲ್ಲಿ ಮೃತ ಪಟ್ಟಿರುವಳು ಎಂದರೆ ಸರಿ. ದಾವಾ ಷೆಡ್ಯೂಲ್ 'ಬಿ' ದ ಆಸ್ತಿಗಳು ನನ್ನ ತಂದೆಯ ಆಸ್ತಿಗಳು ಎಂದರೆ ಸರಿ. ಬುದ್ನಿ ಬಿ ಕೆ ಗ್ರಾಮದಲ್ಲಿ ನನ್ನ ಹೆಸರಿನಲ್ಲಿ ಸರ್ವೇ ನಂಬರ್ 22/1 ವಿಸ್ತೀರ್ಣ 4 ಎಕರೆ 18 ಗುಂಟೆ, ಸರ್ವೇ ನಂಬರ್ 23/1 ವಿಸ್ತೀರ್ಣ 6 ಎಕರೆ 18 ಗುಂಟೆ, ಸರ್ವೇ ನಂಬರ್ 23/4 ವಿಸ್ತೀರ್ಣ 4 ಎಕರೆ 22 ಗುಂಟೆ ಜಮೀನುಗಳು ಇರುವವು. ಮೃತ ನನ್ನ ಸಹೋದರ ವೆಂಕಪ್ಪನ ಹೆಸರಿನಲ್ಲಿ ಸರ್ವೇ ನಂಬರ್ 22/4 ವಿಸ್ತೀರ್ಣ 4 ಎಕರೆ 19 ಗುಂಟೆ, ಸರ್ವೇ ನಂಬರ್ 23/5 ವಿಸ್ತೀರ್ಣ 4 ಎಕರೆ 21 ಗುಂಟೆ, ಸರ್ವೇ ನಂಬರ್ 26/7 ವಿಸ್ತೀರ್ಣ 6 ಎಕರೆ 12 ಗುಂಟೆ ಜಮೀನುಗಳು ಇರುವವು ಎಂದರೆ ಸರಿ.

3. ಮೃತ ವೆಂಕಪ್ಪನ ಹೆಸರಿನಲ್ಲಿ ಇರುವ ಆಸ್ತಿಗೆ ಸಂಬಂಧಪಟ್ಟಂತೆ ವಾದಿ ಮತ್ತು ಅವಳ ತಾಯಿ ಅಸಲು ದಾವಾ ನಂ. 154/2001 ರ ದಾವೆ ದಾಖಲು ಮಾಡಿರುವರು ಎಂದರೆ ಸರಿ. ಆ ದಾವೆ ಡಿಕ್ರಿಯಾಗಿ ತಲಾ 1/3 ಹಿಸ್ಸೆ ನೀಡಿರುವರು ಎಂದರೆ ಸರಿ. ವಾದಿಯ ತಾಯಿ 2013 ರಲ್ಲಿ ಮೃತ ಪಟ್ಟ ನಂತರ ಈ ದಾವೆಯ ಪ್ರತಿವಾದಿ 2 ರಿಂದ 5 ರವರು ಕೂಡಿಕೊಂಡು ಅಸಲು ದಾವಾ ನಂ. 02/2014 ರ ದಾವೆ ದಾಖಲು ಮಾಡಿದ್ದರು ಎಂದರೆ ಸರಿ. ಈ ದಾವೆಯ ದಾವಾ ಆಸ್ತಿಗಳು ಸರ್ವೇ ನಂಬರ್ 22/2 ವಿಸ್ತೀರ್ಣ 4 ಎಕರೆ 19 ಗುಂಟೆ, 23/5 ವಿಸ್ತೀರ್ಣ 4 ಎಕರೆ 21 ಗುಂಟೆ, 26/7 ವಿಸ್ತೀರ್ಣ 6 ಎಕರೆ 12 ಗುಂಟೆಯ ದಾವಾ ಆಸ್ತಿಗಳು ಇದ್ದವು ಎಂದರೆ ಸರಿ.

4. ಅಸಲು ದಾವಾ ನಂ. 02/2014 ರ ದಾವೆ ರಾಜಿಯಾಗಿರುವುದು ಎಂದರೆ ಸರಿ. ಆ ದಾವೆಯಲ್ಲಿ ವಾದಿಯು ತನ್ನ ಹಕ್ಕನ್ನು ಬಿಟ್ಟುಕೊಟ್ಟು ನಗದು ರೂಪದಲ್ಲಿ ರೂ. 16 ಲಕ್ಷ 50 ಸಾವಿರ ಪಡೆದುಕೊಂಡಿರುವಳು ಎಂದರೆ ಸರಿ. ದಾವಾ ಆಸ್ತಿಗಳು ಕಿಡಿಯಪ್ಪ ಮೃತ ಪಡುವ ಸಮಯದಲ್ಲಿ ಆತನ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಆತ ಮೃತ ಪಟ್ಟ ನಂತರ ನಾನು ಮತ್ತು ಉಳಿದ ವಾದಿಯರು ಮತ್ತು ಪ್ರತಿವಾದಿಯರು ನೇರವಾರಸುದಾರರು ಎಂದರೆ ಸರಿ. ನನ್ನ ತಂದೆ ಮೃತ ಪಟ್ಟ ನಂತರ ವಾದಿಗೆ ಮೋಸ ಮಾಡುವ ಸಲುವಾಗಿ ನನ್ನ ಹೆಸರಿನಲ್ಲಿ ಮಾತ್ರ ಹಕ್ಕು ಬದಲಾವಣೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿನ ಹಕ್ಕು ನಷ್ಟ ಮಾಡುವ ಸಲುವಾಗಿ ಸುಳ್ಳು ಲಿಖಿತ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ